


بسم اللهِ الرّحمٰن الرّحيم

# ಮಕ್ಕಾ ವಿಜಯದ ನಂತರದ ದಂಡಯಾತ್ರೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–10–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮಕ್ಕಾ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ಮದೀನಾಕ್ಕೆ ಹಿಂದಿರುಗಿದ ನಂತರವೂ ಕೆಲವು ದಂಡಯಾತ್ರೆಗಳನ್ನು ನಡೆಸಬೇಕಾಗಿ ಬಂತು. ಅದರ ಬಗ್ಗೆ ನಾನು ಪ್ರಸ್ತಾಪಿಸುತ್ತೇನೆ. ಅವುಗಳಲ್ಲಿ ಒಂದು ಖೈಸ್ ಬಿನ್ ಸಅದ್ ಬಿನ್ ಉಬಾದಾರ ದಂಡಯಾತ್ರೆಯಾಗಿದೆ. ಇದು ಹಿಜರಿ ಎಂಟನೇ ವರ್ಷದಲ್ಲಿ ಸದಾಅ್ ಕಡೆಗೆ ನಡೆಯಿತು. ಹಝ್ರತ್ ಪೈಗಂಬರ್(ಸ) ಜಅರಾನಾದಿಂದ ಮದೀನಾಕ್ಕೆ ಹಿಂದಿರುಗಿದ ನಂತರ, ಇಸ್ಲಾಮಿನ ಸಂದೇಶ ತಲುಪಿಸಲಿಕ್ಕಾಗಿ ವಿವಿಧ ಪ್ರದೇಶಗಳಿಗೆ ಸೈನ್ಯಗಳನ್ನು ಕಳುಹಿಸಿದರು. ಅದರಂತೆ, ಯೆಮನ್‌ನ ರಾಜಧಾನಿಯಾದ ಸನ್‌ಆ ಕಡೆಗೆ ಮಹಾಜಿರ್ ಬಿನ್ ಅಬೀ ಉಮಯ್ಯರನ್ನು ಮತ್ತು ಹಝ್ರುಲ್ ಮೌತ್‌ನ ಕಡೆಗೆ ಝಿಯಾದ್ ಬಿನ್ ಲಬೀದ್‌ರನ್ನು ಕಳುಹಿಸಿದರು. ಮತ್ತೊಂದು ಸೈನ್ಯವನ್ನು ಸಿದ್ಧಪಡಿಸಿ, ಅದರ ಸೇನಾಧಿಪತಿಯನ್ನಾಗಿ ಖೈಸ್ ಬಿನ್ ಸಅದ್‌ರನ್ನು ನೇಮಿಸಿದರು. ಹಝ್ರತ್ ಪೈಗಂಬರ್(ಸ) ಖೈಸ್ ಬಿನ್ ಸಅದ್‌ರನ್ನು ನಾಲ್ಕು ನೂರು ಜನರೊಂದಿಗೆ, ಯೆಮನ್‌ನ ಸದಾಅ್ ಗೋತ್ರಕ್ಕೆ ಇಸ್ಲಾಂ ಧರ್ಮದ ಸಂದೇಶ ನೀಡಲು ಕಳುಹಿಸಿದರು.

ಹಝ್ರತ್ ಖೈಸ್(ರ) ಖಝ್ರಜ್‌ನ ಮುಖ್ಯಸ್ಥ ಹಝ್ರತ್ ಸಅದ್ ಬಿನ್ ಉಬಾದರ ಪುತ್ರರಾಗಿದ್ದರು. ಅವರನ್ನು ಉತ್ತಮ ಸಲಹೆಗಾರ, ಧೀರ ಮತ್ತು ನುರಿತ ಕುದುರೆಸವಾರ ಎಂದು ಪರಿಗಣಿಸಲಾಗುತ್ತಿತ್ತು. ಉದಾರತೆಯ ಗುಣದಲ್ಲಿಯೂ ಅವರು ಬಹಳ ಪ್ರಸಿದ್ಧರಾಗಿದ್ದರು.

ಹಝ್ರತ್ ಖೈಸ್ ಕಿನಾಅ್‌ನಲ್ಲಿ ಬೀಡುಬಿಟ್ಟಿದ್ದಾಗ, ಸದಾಅ್ ಗೋತ್ರದ ಒಬ್ಬ ವ್ಯಕ್ತಿ, ಝಿಯಾದ್ ಬಿನ್ ಹಾರಿಸ್, ಆ ಕಡೆಯಿಂದ ಹಾದುಹೋದರು. ಅವರು ಸ್ವಲ್ಪ ಕಾಲದ ಮೊದಲು ಮುಸ್ಲಿಂ ಆಗಿದ್ದರು. ಈ ಸೈನ್ಯವು ತನ್ನ ಗೋತ್ರದ ಮೇಲೆ ದಾಳಿ ಮಾಡಲು ಹೋಗುತ್ತಿದೆ ಎಂದು ತಿಳಿದಾಗ, ಅವರು ಅಲ್ಲಿಂದ ನೇರವಾಗಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹಾಜರಾದರು ಮತ್ತು ಹೀಗೆ ವಿನಂತಿಸಿದರು: 'ನೀವು ಕಳುಹಿಸಿದ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳಿರಿ, ನಾನು ನನ್ನ ಗೋತ್ರದ ಕುರಿತು ಖಾತರಿ ನೀಡುತ್ತೇನೆ ಮತ್ತು ಅವರ ಇಸ್ಲಾಂ ಸ್ವೀಕಾರದ ಬಗ್ಗೆಯೂ ಭರವಸೆಯನ್ನು ನೀಡುತ್ತೇನೆ.' ಅಂದರೆ, ಒಂದು ಖಾತರಿ ಏನೆಂದರೆ ಅವರು ಮುಸ್ಲಿಮರ ಮೇಲೆ ಆಕ್ರಮಣ ಮಾಡುವುದಿಲ್ಲ ಅಥವಾ ಹಾನಿ ಮಾಡುವುದಿಲ್ಲ, ಮತ್ತು ಎರಡನೆಯದು ಏನೆಂದರೆ ಅವರು ನಿಧಾನವಾಗಿ ಇಸ್ಲಾಮನ್ನು ಸ್ವೀಕರಿಸುವರು.

ಹಝ್ರತ್ ಪೈಗಂಬರ್(ಸ) ಅವರ ಮಾತನ್ನು ಒಪ್ಪಿಕೊಂಡು ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡರು. ಅನಂತರ ಅವರು ಮೆಲ್ಲ ಮೆಲ್ಲನೇ ತಬ್ಲೀಗ್ ಮಾಡಿದಾಗ ಅವರ ಗೋತ್ರದ ಜನರು ಇಸ್ಲಾಮನ್ನು ಸ್ವೀಕರಿಸಿದರು. ಏಕೆಂದರೆ ದಾಳಿ ಮಾಡುವುದು ಮತ್ತು ಬಲವಂತವಾಗಿ ಮುಸ್ಲಿಂ ಮಾಡುವುದು ಇಸ್ಲಾಮಿನ ಬೋಧನೆಗಳಿಗೂ ಮತ್ತು ಹಝ್ರತ್ ಪೈಗಂಬರ್(ಸ)ರ ಸ್ವಂತ ರೀತಿ ಮತ್ತು ಸುನ್ನತ್‌ಗೂ ವಿರುದ್ಧವಾಗಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಝಿಯಾದ್‌ರನ್ನೇ ಅವರ ಮುಖಂಡರನ್ನಾಗಿ ನೇಮಿಸಿದರು.

ಹಝ್ರತ್ ಉಯೈನ ಬಿನ್ ಹಿಸ್ನ್ ಫಝಾರಿಯವರ ದಂಡಯಾತ್ರೆಯ ಪ್ರಸ್ತಾಪವೂ ಇದೆ. ಈ ದಂಡಯಾತ್ರೆ ಮುಹರ್ರಂ, ಹಿಜರಿ ಒಂಬತ್ತರಲ್ಲಿ ಬನೂ ತಮೀಮ್‌ನ ಕಡೆಗೆ ನಡೆಯಿತು. ಇದರ ಹಿನ್ನೆಲೆ ಹೀಗಿದೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಬಿಶ್ರ್ ಬಿನ್ ಸುಫ್‌ಯಾನ್‌ರನ್ನು ಖುಝಾಅ ಗೋತ್ರದ ಶಾಖೆಯಾದ ಬನೂ ಕಅಬ್‌ನ ಕಡೆಗೆ ಝಕಾತಿನ ಹಣದ ಸಂಗ್ರಹಕ್ಕಾಗಿ ಕಳುಹಿಸಿದರು. ಹಝ್ರತ್ ಬಿಶ್ರ್ ಬಿನ್ ಸುಫ್‌ಯಾನ್‌ರ ಆದೇಶದ ಮೇರೆಗೆ ಬನೂ ಖುಝಾಅದ ಹಣವು ಎಲ್ಲ ಕಡೆಗಳಿಂದ ಅವರ ಬಳಿ ಸಂಗ್ರಹವಾಗಲು ಪ್ರಾರಂಭಿಸಿತು.

ಮುಸ್ಲಿಂ ಆಗಿರದ ಬನೂ ತಮೀಮ್‌ನವರಿಗೆ ಈ ಸಂಪತ್ತುಗಳು ತುಂಬಾ ಹೆಚ್ಚಾಗಿ ತೋರಿತು. ಆಗ ಅವರು, 'ಈತ ಏಕೆ ಅನ್ಯಾಯವಾಗಿ ನಮ್ಮ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾನೆ?' ಎಂದು ಕೇಳಿ ತಮ್ಮ ಖಡ್ಗಗಳನ್ನು ಹೊರತೆಗೆದರು. ಈ ಜಗಳ ಮತ್ತು ಯುದ್ಧದ ಪರಿಸ್ಥಿತಿಯನ್ನು ನೋಡಿ, ಹಝ್ರತ್ ಬಿಶ್ರ್ ಬಿನ್ ಸುಫ್ಯಾನ್ ಯಾವುದೇ ಹಣದ ವಸೂಲಿ ಮಾಡದೆ ಸ್ವತಃ ಅಲ್ಲಿಂದ ಹಿಂತಿರುಗಿದರು ಮತ್ತು ಹಝ್ರತ್ ಪೈಗಂಬರ್(ಸ)ರ ಬಳಿ ಬಂದು ಪರಿಸ್ಥಿತಿಯ ಬಗ್ಗೆ ತಿಳಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಯೈನ ಬಿನ್ ಹಿಸ್ನ್‌ರನ್ನು ಐವತ್ತು ಕುದುರೆ ಸವಾರರೊಂದಿಗೆ ಬನೂ ತಮೀಮ್‌ನ ಕಡೆಗೆ ಕಳುಹಿಸಿದರು. ಉಯೈನ ತಮ್ಮ ಸಂಗಡಿಗರೊಂದಿಗೆ ಬನೂ ತಮೀಮ್ ನೆಲೆಸಿದ್ದ ಮತ್ತು ತಮ್ಮ ಜಾನುವಾರುಗಳನ್ನು ಮೇಯಿಸುತ್ತಿದ್ದ ಮರುಭೂಮಿಯನ್ನು ತಲುಪಿದರು. ಬನೂ ತಮೀಮ್ ಗೋತ್ರದ ಜನರು ಈ ಸೈನ್ಯವನ್ನು ನೋಡಿದಾಗ, ಎಲ್ಲವನ್ನೂ ಬಿಟ್ಟು ಅಲ್ಲಿಂದ ಓಡಿಹೋದರು. ಅವರ ಹನ್ನೊಂದು ಪುರುಷರು, ಹನ್ನೊಂದು ಮಹಿಳೆಯರು ಮತ್ತು ಮೂವತ್ತು ಮಕ್ಕಳು ಸೆರೆಯಾದರು. ಅವರನ್ನು ಮದೀನಾಕ್ಕೆ ಕರೆತಂದು ಹಝ್ರತ್ ಪೈಗಂಬರ್(ಸ)ರ ಆದೇಶದಂತೆ ಹಝ್ರತ್ ರಮ್‌ಲ ಬಿಂತ್ ಹಾರಿಸ್‌ರ ಮನೆಯಲ್ಲಿ ಇರಿಸಲಾಯಿತು.

ಅನಂತರ, ಎಂಬತ್ತು ಅಥವಾ ತೊಂಬತ್ತು ಪ್ರಮುಖ ವ್ಯಕ್ತಿಗಳನ್ನು ಒಳಗೊಂಡ ಬನೂ ತಮೀಮ್‌ನ ಒಂದು ನಿಯೋಗವು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಯಿತು. ನಿಯೋಗದ ಮುಖ್ಯಸ್ಥನು ಹೇಳಿದನು: 'ನಾವು ಕವನಗಳು ಮತ್ತು ಭಾಷಣಗಳಲ್ಲಿ ನಿಮ್ಮೊಂದಿಗೆ ಪೈಪೋಟಿ ನಡೆಸಲು ಬಯಸುತ್ತೇವೆ' ಅಂದರೆ, ನಮ್ಮ ಗೋತ್ರದ ಭಾಷಣಕಾರರು ಮತ್ತು ಕವಿಗಳು ಎಷ್ಟು ಶ್ರೇಷ್ಠರು ಎಂದು ನಿಮಗೆ ಗೊತ್ತಾಗಲು ನೀವು ನಮ್ಮೊಂದಿಗೆ ಸ್ಪರ್ಧೆ ನಡೆಸಬೇಕೆಂದು ಕೋರಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಕವನ ಮತ್ತು ಭಾಷಣದಲ್ಲಿ ಹೆಮ್ಮೆ ತೋರಿಸುವುದು ನನ್ನ ಆಗಮನದ (ಪ್ರವಾದಿತ್ವದ) ಉದ್ದೇಶವಲ್ಲ. ನನ್ನ ಉದ್ದೇಶವು ಅಲ್ಲಾಹನ ಕಡೆಗೆ ನಿಮ್ಮನ್ನು ಕರೆಯುವುದಾಗಿದೆ. ಆದರೆ ನೀವು ಇಲ್ಲಿ ಬಂದಿರುವುದರ ಉದ್ದೇಶ ಇದೇ ಆಗಿದ್ದರೆ, ನಿಮ್ಮ ಕಲೆಯನ್ನು ಪ್ರದರ್ಶಿಸಿರಿ. ನಾವು ಅದಕ್ಕೆ ಉತ್ತರ ನೀಡುತ್ತೇವೆ ಎಂದು ಹೇಳಿದರು.

ಸ್ಪರ್ಧೆಯ ನಂತರ ನಿಯೋಗದೊಂದಿಗೆ ಬಂದಿದ್ದ ಅಕ್ರಅ್ ಬಿನ್ ಹಾಬಿಸ್ ತಮ್ಮ ಸಂಗಡಿಗರ ಮುಂದೆ ತಾನಾಗಿಯೇ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದರು: 'ಅವರ ಭಾಷಣಕಾರ ನಮ್ಮ ಭಾಷಣಕಾರನಿಗಿಂತ ಉತ್ತಮ ಮತ್ತು ಅವರ ಕವಿ ನಮ್ಮ ಕವಿಗಿಂತ ಎಷ್ಟೋ ಪಟ್ಟು ಶ್ರೇಷ್ಠ. ಅವರು ನಮ್ಮಿಂದ ಬಹಳ ಮುಂದಿದ್ದಾರೆ' ಎಂದು ಹೇಳಿದರು. ಎಲ್ಲವೂ ಮುಗಿದ ನಂತರ ಅಕ್ರಅ್ ಬಿನ್ ಹಾಬಿಸ್ ಇಸ್ಲಾಮನ್ನು ಸ್ವೀಕರಿಸಿದರು. ಬನೂ ತಮೀಮ್‌ನವರು ಇಸ್ಲಾಂ ಸ್ವೀಕರಿಸಿದ ನಂತರ, ಅವರ ಸೆರೆಯಾಳುಗಳನ್ನು ಹಝ್ರತ್ ಪೈಗಂಬರ್(ಸ) ಹಿಂದಿರುಗಿಸಿದರು. ಎಲ್ಲರಿಗೂ ಬಹುಮಾನಗಳನ್ನು ನೀಡಿ ಗೌರವದಿಂದ ಸತ್ಕರಿಸಿ ಕಳುಹಿಸಿದರು.

ಅನಂತರ ಖುತ್‌ಬ ಬಿನ್ ಆಮಿರ್‌ರ ದಂಡಯಾತ್ರೆಯಾಗಿದೆ. ಅದು ಹಿಜರಿ ಒಂಬತ್ತು, ಸಫರ್ ತಿಂಗಳಲ್ಲಿ ನಡೆಯಿತು. ಒಂದು ವರದಿಯ ಪ್ರಕಾರ ಅವರನ್ನು ಹಝ್ರತ್ ಪೈಗಂಬರ್(ಸ) ಖಬಾಲದ ಪ್ರದೇಶಕ್ಕೆ, ಮತ್ತೊಂದು ವರದಿಯ ಪ್ರಕಾರ 'ಬೀಶ'ದ ಸುತ್ತಮುತ್ತಲ ಪ್ರದೇಶಕ್ಕೆ ಕಳುಹಿಸಿದರು ಎಂದು ಉಲ್ಲೇಖಿಸಲಾಗಿದೆ. ಒಮ್ಮೆಲೇ ಅವರ ಮೇಲೆ ದಾಳಿ ಮಾಡಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಅದರಂತೆ ಮುಸ್ಲಿಮರು ಒಮ್ಮೆಲೇ ಅವರ ಮೇಲೆ ದಾಳಿ ಮಾಡಿದರು, ತೀವ್ರ ಯುದ್ಧ ನಡೆಯಿತು ಮತ್ತು ಉಭಯ ಪಕ್ಷಗಳಲ್ಲೂ ಅನೇಕರು ಗಾಯಗೊಂಡರು ಹಾಗೂ ವಿರೋಧಿ ಗೋತ್ರದ ಬಹಳಷ್ಟು ಜನರು ಹತರಾದರು. ಕೊನೆಗೆ ಹಝ್ರತ್ ಖುತ್‌ಬ(ರ) ಯುದ್ಧಸಂಪತ್ತಾಗಿ ಒಂಟೆಗಳು, ಮೇಕೆಗಳು ಮತ್ತು ಮಹಿಳೆಯರನ್ನು ಮದೀನಾಕ್ಕೆ ತಂದರು.

ಅನಂತರ ಝ್ಹಹಾಕ್ ಬಿನ್ ಸುಫ್‌ಯಾನ್ ಕಿಲಾಬಿಯ ದಂಡಯಾತ್ರೆಯ ಪ್ರಸ್ತಾಪವಿದೆ. ಇದು ರಬೀಉಲ್ ಅವ್ವಲ್, ಹಿಜರಿ ಒಂಬತ್ತರಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಝ್ಹಹಾಕ್ ಬಿನ್ ಸುಫ್‌ಯಾನ್ ಕಿಲಾಬಿಯರನ್ನು ಅವರದೇ ಗೋತ್ರವಾದ ಬನೂ ಕಿಲಾಬ್‌ನ ಕಡೆಗೆ, ಖಿರ್‌ತಾಅ್ ಎಂಬ ಸ್ಥಳಕ್ಕೆ ಕಳುಹಿಸಿದರು. ಅವರು ಇಸ್ಲಾಂ ಧರ್ಮದ ಸಂದೇಶವನ್ನು ತಲುಪಿಸಿದರು, ಆದರೆ ಗೋತ್ರದವರು ನಿರಾಕರಿಸಿದರು ಮತ್ತು ಪರಿಸ್ಥಿತಿ ಯುದ್ಧಕ್ಕೆ ತಿರುಗಿತು. ಅವರು ಖಿರ್‌ತಾಅ್ ನಿವಾಸಿಗಳನ್ನು ಸೋಲಿಸಿ, ಯುದ್ಧಸಂಪತ್ತನ್ನು ಪಡೆದುಕೊಂಡರು.

ಅಲ್ಕಮ ಬಿನ್ ಮುಜದ್ದಿಧ್‌ರ ದಂಡಯಾತ್ರೆಯ ಪ್ರಸ್ತಾಪವಿದೆ. ಈ ದಂಡಯಾತ್ರೆ ಹಿಜರಿ ಒಂಬತ್ತು, ರಬೀಉಸ್ಸಾನಿ ತಿಂಗಳಲ್ಲಿ ಅಥವಾ ಕೆಲವು ವರದಿಗಳ ಪ್ರಕಾರ ಸಫರ್ ಮಾಸದಲ್ಲಿ ನಡೆಯಿತು. ಇಥಿಯೋಪಿಯದ ಕೆಲವು ಯೋಧರು ಜಿದ್ದಾದ ಕರಾವಳಿಯಲ್ಲಿ ಇಳಿದಿದ್ದಾರೆ ಎಂಬ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಕೆಲವು ವರದಿಗಳ ಪ್ರಕಾರ ಇವರು ಮಕ್ಕಾದವರನ್ನು ಕೊಳ್ಳೆಹೊಡೆಯಲು ಬಯಸಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲ್ಕಮ(ರ)ರನ್ನು ಮೂರು ನೂರು ಜನರ ಸೇನಾಧಿಪತಿಯನ್ನಾಗಿ ನೇಮಿಸಿ ಅವರ ಕಡೆಗೆ ಕಳುಹಿಸಿದರು. ಸೇನೆಯ ಆಗಮನದ ಬಗ್ಗೆ ತಿಳಿದಾಗ, ಆ

ಜನರು ತಮ್ಮ ದೋಣಿಗಳನ್ನು ಏರಿ ಸಮುದ್ರ ಮಾರ್ಗದಿಂದ ಪರಾರಿಯಾದರು. ಹಝ್ರತ್ ಅಲ್ಕಮ(ರ) ಒಂದು ದ್ವೀಪದವರೆಗೆ ಅವರನ್ನು ಬೆನ್ನಟ್ಟಿದರು.

(ಈ ಕಾರ್ಯಾಚರಣೆಯ ಒಂದು ಗಮನಾರ್ಹ ಘಟನೆಯ ಕುರಿತು ಹುಝೂರ್ ಹೇಳಿದರು. ಅದೇನೆಂದರೆ,) ಬೆಂಕಿಗೆ ನೆಗೆಯಲು ಸೇನಾಧಿಪತಿ ಜನರಿಗೆ ಆದೇಶ ನೀಡಿದಾಗ ಕೆಲವು ಜನರು ನೆಗೆಯಲು ತಯಾರಾದರು ಮತ್ತು ಕೆಲವರು ಹಿಂಜರಿದರು ಎಂದು ಉಲ್ಲೇಖಿಸಲಾಗಿದೆ. ಈ ವಿಷಯವನ್ನು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಲಾದಾಗ ಅವರು ತೀವ್ರ ಅಸಂತುಷ್ಟಿಯನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು: 'ಒಂದು ವೇಳೆ ಅವರು ಬೆಂಕಿಯೊಳಗೆ ಪ್ರವೇಶಿಸಿದ್ದರೆ, ಕೊನೆಗಾಲದ ತನಕ ಅವರು ಅದರಿಂದ ಹೊರಬರುತ್ತಿರಲಿಲ್ಲ, ಏಕೆಂದರೆ ವಿಧೇಯತೆಯು ಕೇವಲ ಸನ್ನಡತೆಯ ವಿಷಯದಲ್ಲಾಗಿದೆ.' ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಈ ಘಟನೆಯನ್ನು ವಿವರಿಸುತ್ತಾ, ಶರೀಅತಿಗೆ ವಿರುದ್ಧವಾದ ವಿಷಯಗಳಲ್ಲಿ ವಿಧೇಯತೆ ತೋರಿಸಬಾರದು ಎಂದು ಹೇಳಿದ್ದಾರೆ.

ಹಝ್ರತ್ ಅಲಿ(ರ)ರ ದಂಡಯಾತ್ರೆಯ ಪ್ರಸ್ತಾಪವೂ ಬರುತ್ತದೆ, ಇದು ರಬೀಉಸ್ಸಾನಿ, ಹಿಜರಿ ಒಂಬತ್ತರಲ್ಲಿ ನಡೆಯಿತು. ರಸೂಲುಲ್ಲಾಹ್(ಸ) ಹಝ್ರತ್ ಅಲಿ(ರ)ರನ್ನು ನೂರೈವತ್ತು ಅನ್ಸಾರ್‌ಗಳೊಂದಿಗೆ, ಬನೂ ತಯ್ಯ್‌ನ ಫುಲ್ಸ್ ವಿಗ್ರಹವನ್ನು ಕೆಡವಲು ಕಳುಹಿಸಿದರು. ಅವರು ಬೆಳಿಗ್ಗೆ ದಾಳಿ ಮಾಡಿ ಫುಲ್ಸ್ ವಿಗ್ರಹವನ್ನು ಕೆಡವಿದರು ಮತ್ತು ಬಹಳಷ್ಟು ಸೆರೆಯಾಳುಗಳ ಹಾಗೂ ಜಾನುವಾರುಗಳನ್ನು ವಶಪಡಿಸಿಕೊಂಡರು. ಅದು ಪ್ರಸಿದ್ಧ ದಾನಿ ಮತ್ತು ಉದಾರಿಯಾದ ಹಾತಿಮ್ ತಾಯೀರ ಗೋತ್ರವಾಗಿತ್ತು. ಸೆರೆಯಾಳುಗಳಲ್ಲಿ ಅವರ ಪುತ್ರಿ ಸಫಾನ ಕೂಡ ಇದ್ದಳು. ಗೋತ್ರದ ಮುಖ್ಯಸ್ಥನಾಗಿದ್ದ ಅವರ ಪುತ್ರ ಅದ್ದಿ ಪರಾರಿಯಾಗಿ ಸಿರಿಯಾ ದೇಶದ ಕಡೆಗೆ ಹೊರಟನು. ಹಾತಿಮ್‌ರ ಪುತ್ರಿ ಸಫಾನಾಳನ್ನು ಆಕೆಯ ಒತ್ತಾಯದ ಮೇರೆಗೆ ಹಝ್ರತ್ ಪೈಗಂಬರ್(ಸ) ಬಿಡುಗಡೆ ಮಾಡಿದರು. ಆಕೆ ಬಿಡುಗಡೆಯಾದ ತಕ್ಷಣ ಮುಸ್ಲಿಂ ಆದಳು. ಹಝ್ರತ್ ಪೈಗಂಬರ್(ಸ)ರ ಅನುಮತಿಯೊಂದಿಗೆ ಅವರು ತಮ್ಮ ಸಹೋದರ ಅದ್ದಿಯರ ಬಳಿ ಸಿರಿಯಾಗೆ ಹೋದಳು. ಸಾಧ್ಯವಾದಷ್ಟು ಬೇಗನೇ ಹಝ್ರತ್ ಪೈಗಂಬರ್(ಸ)ರ ಬಳಿ ಮದೀನಾಕ್ಕೆ ಹೋಗಲು ಅವಳು ತಮ್ಮ ಸಹೋದರನನ್ನು ಪ್ರೇರೇಪಿಸಿದಳು. ಅದ್ದಿಯ ಧರ್ಮ ಮತ್ತು ಅವರ ವೈಯಕ್ತಿಕ ವಿಷಯಗಳ ಬಗ್ಗೆಯೂ ರಸೂಲುಲ್ಲಾಹ್(ಸ) ಕೆಲವು ವಿಷಯಗಳನ್ನು ಕೇಳಿದರು. ಅವುಗಳಲ್ಲಿ ಕೆಲವು ವಿಷಯಗಳು ಅದ್ದಿರಿಗೆ ಹೊರತುಪಡಿಸಿ ಬೇರೆ ಯಾರಿಗೂ ತಿಳಿದಿರಲಿಲ್ಲ. ಹಝ್ರತ್ ಪೈಗಂಬರ್(ಸ)ರ ಸದ್ಗುಣ ಮತ್ತು ಈ ಎಲ್ಲ ಮಾತುಗಳನ್ನು ನೋಡಿ ನಾನು ಮುಸ್ಲಿಮನಾದೆ ಎಂದು ಅದ್ದೀ ಹೇಳಿದರು. ಹಝ್ರತ್ ಅಲಿ(ರ)ರ ಈ ಕಾರ್ಯಾಚರಣೆಯ ಸ್ವಲ್ಪ ಸಮಯದ ನಂತರ, ತಯ್ಯ್ ಗೋತ್ರದ ನಿಯೋಗವು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಇಸ್ಲಾಮನ್ನು ಸ್ವೀಕರಿಸಿದರು.

ಉಕ್ಕಾಶಾ ಬಿನ್ ಮಿಹ್ಸನ್ ದಂಡಯಾತ್ರೆಯ ಪ್ರಸ್ತಾಪವಿದೆ, ಇದು ರಬೀಉಸ್ಸಾನಿ, ಹಿಜರಿ ಒಂಬತ್ತರಲ್ಲಿ ಜನಾಬ್ ಕಡೆಗೆ ಹೊರಟಿತು. ಈ ದಂಡಯಾತ್ರೆಯ ಹೆಚ್ಚಿನ ವಿವರಗಳು ವರದಿಯಾಗಿಲ್ಲ. ಇದು ನಡೆಯಿತು ಎಂಬಷ್ಟೇ ಉಲ್ಲೇಖವಿದೆ.

ತಬೂಕ್ ಯುದ್ಧದ ಬಗ್ಗೆ ಕೆಲವು ಪ್ರಾಥಮಿಕ ವಿವರಗಳನ್ನು ಹುಝೂರ್ ಪ್ರಸ್ತುತಪಡಿಸಿದರು. ಇದು ಹಿಜರಿ 9, ರಜಬ್ ಮಾಸದಲ್ಲಿ, ಎಂದರೆ, ಕ್ರಿ.ಶ. 630, ಸೆಪ್ಟೆಂಬರ್‌ನಲ್ಲಿ ನಡೆಯಿತು. ಇದು ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನದ ಕೊನೆಯ ಯುದ್ಧವಾಗಿತ್ತು. ತಬೂಕ್ ಎಂಬ ಹೆಸರಿನ ಚಿಲುಮೆಯ ಬಳಿ ತಂಗಿದ ಕಾರಣದಿಂದ ಇದನ್ನು ತಬೂಕ್ ಯುದ್ಧವೆಂದು ಕರೆಯಲಾಗುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ತಬೂಕ್ ಯುದ್ಧವನ್ನು 'ಸಾಅತುಲ್ ಉಸ್ರ್' ಅಂದರೆ ಸಂಕಷ್ಟದ ಕ್ಷಣ ಎಂಬ ಹೆಸರಿನಿಂದ ಪ್ರಸ್ತಾಪಿಸಲಾಗಿದೆ. ಏಕೆಂದರೆ ಮುಸ್ಲಿಮರಿಗೆ ಇದರಲ್ಲಿ ಬಹಳಷ್ಟು ಕಷ್ಟ ಮತ್ತು ತೊಂದರೆಯನ್ನು ಎದುರಿಸಬೇಕಾಯಿತು. ತಬೂಕ್ ಯುದ್ಧದ ಮೂಲ ಕಾರಣವೇನೆಂದರೆ, ಮಕ್ಕಾ ವಿಜಯ, ಬನೂ ಹವಾಝಿನ್‌ನಂತಹ ಅತ್ಯಂತ ಶಕ್ತಿಶಾಲಿ ಗೋತ್ರದ ಹೀನಾಯ ಸೋಲು ಮತ್ತು ಅರಬ್‌ನ ಸುತ್ತಮುತ್ತಲಿನ ಎಲ್ಲ ಗೋತ್ರಗಳ ಮೇಲೆ ಮುಸ್ಲಿಮರಿಗೆ ಮೇಲುಗೈ ಸಿಕ್ಕ ನಂತರ, ಯಹೂದಿಯರು, ಕ್ರೈಸ್ತರು ಮತ್ತು ಕಪಟವಿಶ್ವಾಸಿಗಳು ತಮ್ಮ ಪ್ರಯತ್ನಗಳು ವಿಫಲವಾಗುತ್ತಿರುವುದನ್ನು ನೋಡಿ, ಮುಸ್ಲಿಮರನ್ನು ಸಂಪೂರ್ಣವಾಗಿ ನಾಶಪಡಿಸಲಿಕ್ಕಾಗಿ ಆ ಕಾಲದ ಮಹಾಶಕ್ತಿಯಾದ ರೋಮನ್ ಚಕ್ರವರ್ತಿಯೊಡನೆ ತಮ್ಮ ಸೈನ್ಯವನ್ನು ಕಳುಹಿಸಲು ಕೋರಿಕೊಂಡರು. ಮತ್ತೊಂದೆಡೆ ರೋಮನ್ ಚಕ್ರವರ್ತಿ ತನ್ನ ಸೈನ್ಯವನ್ನು ಕಳುಹಿಸುತ್ತಿದ್ದಾನೆ, ಅದು ಮದೀನದಲ್ಲಿ ಮುಹಮ್ಮದ್(ಸ) ಸಮೇತ ಎಲ್ಲ ಮುಸ್ಲಿಮರನ್ನು ನಿರ್ನಾಮ ಮಾಡುವುದು ಎಂದು ಕಪಟವಿಶ್ವಾಸಿಗಳು ಮದೀನದಲ್ಲಿ ವದಂತಿಗಳನ್ನು ಹರಡಲು ಪ್ರಾರಂಭಿಸಿದರು. ಇದರಿಂದ ಹಝ್ರತ್ ಪೈಗಂಬರ್(ಸ) ಸ್ವತಃ ಆ ಸೈನ್ಯದ ವಿರುದ್ಧ ಹೋರಾಡಲು ಮದೀನಾದಿಂದ ಸಿರಿಯಾ ಕಡೆಗೆ ಹೊರಟು ಹೋಗಲಿ ಎಂದು ಕಪಟವಿಶ್ವಾಸಿಗಳು ಮತ್ತು ಇತರ ವಿರೋಧಿಗಳು ಬಯಸುತ್ತಿದ್ದರು. ಏಕೆಂದರೆ, ಪ್ರಯಾಣದ ತೊಂದರೆಗಳಿಂದ ಅಥವಾ ರೋಮನ್ ಚಕ್ರವರ್ತಿಯೊಂದಿಗಿನ ಹೋರಾಟದಿಂದ ಹಝ್ರತ್ ಪೈಗಂಬರ್(ಸ)ರ ಮತ್ತು ಮುಸ್ಲಿಮರ ವಿನಾಶವಾಗುವುದು ಎಂದು ಅವರು ದೃಢವಾಗಿ ನಂಬಿದ್ದರು.

(ಹುಝೂರ್ ಹೇಳಿದರು:) ಇದರ ಇನ್ನಷ್ಟು ವಿವರಗಳಿವೆ, ಅದನ್ನು ಮುಂದಿನ ಬಾರಿ ವಿವರಿಸುತ್ತೇನೆ. ಇನ್‌ಶಾ ಅಲ್ಲಾಹ್.

(ಕೊನೆಯಲ್ಲಿ ಹುಝೂರ್ ಹೇಳಿದರು:) ಇಂದು, ರಬ್ವದ ಗೋಲ್ ಬಜಾರ್‌ನಲ್ಲಿರುವ ಮಸ್ಜಿದ್ ಮಹ್‌ದೀ ಮೇಲೆ ಭಯೋತ್ಪಾದಕರು ದಾಳಿ ಮಾಡಿದ್ದಾರೆ. ಇದರಿಂದ ನಮ್ಮ ಐದಾರು ಜನರು ಗಾಯಗೊಂಡಿದ್ದಾರೆ. ಇಬ್ಬರಿಗೆ ತೀವ್ರ ಗಾಯಗಳಾಗಿವೆ, ಅವರ ಹೊಟ್ಟೆಗೆ ಗುಂಡುಗಳು ತಗುಲಿವೆ ಮತ್ತು ಅವರ ಆಪರೇಶನ್ ಕೂಡ ನಡೆಯುತ್ತಿತ್ತು. ಅಲ್ಲಾಹನು ಅವರ ಸ್ಥಿತಿಯನ್ನು ಉತ್ತಮಗೊಳಿಸಲಿ, ಉಳಿದ ಗಾಯಾಳುಗಳ ಮೇಲೂ ಅಲ್ಲಾಹನು ಕೃಪೆ ತೋರಲಿ. ಒಬ್ಬ ಭಯೋತ್ಪಾದಕನನ್ನು ನಮ್ಮ ಭದ್ರತಾ ಸಿಬ್ಬಂದಿಯವರು ಕೊಂದು ಹಾಕಿದ್ದಾರೆ. ಮತ್ತೊಬ್ಬ ಭಯೋತ್ಪಾದಕ ಓಡಿಹೋಗಿದ್ದಾನೆ. ಅಲ್ಲಾಹನು ಈ ಭಯೋತ್ಪಾದಕರನ್ನು, ಕಾನೂನು ಮುರಿಯುವವರನ್ನು ಮತ್ತು ಜಮಾಅತಿನ ವಿರೋಧಿಗಳನ್ನು ಬೇಗನೆ ಹಿಡಿಗೂಡಲಿ. ಪಂಜಾಬ್‌ನಲ್ಲಿ ನೂರಕ್ಕೆ ನೂರರಷ್ಟು ಅಪರಾಧಗಳನ್ನು ನಿಯಂತ್ರಿಸಲಾಗಿದೆ ಮತ್ತು ಈಗ ಯಾವುದೇ ಅಪರಾಧಿಗಳಿಲ್ಲ ಎಂದು ಪಂಜಾಬಿನ ಸರ್ಕಾರ ಮತ್ತು ಮುಖ್ಯಮಂತ್ರಿ ಹೇಳಿಕೊಳ್ಳುತ್ತಿದ್ದಾರೆ. ಆದರೆ ಅಹ್ಮದಿಯರ ಮೇಲೆ ಪ್ರತಿದಿನ ನಡೆಯುವ ದಾಳಿಗಳು, ಅವರನ್ನು ಶಹೀದ್ ಮಾಡುವುದು, ಗಾಯಗೊಳಿಸುವುದು ಅಥವಾ ಅವರ ಆಸ್ತಿಗಳಿಗೆ ಬೆಂಕಿ ಹಚ್ಚುವುದನ್ನು ಬಹುಶಃ ಇವರು ಅಪರಾಧವೆಂದು ಪರಿಗಣಿಸುತ್ತಿಲ್ಲ ಎಂದು ತೋರುತ್ತದೆ. ಅಲ್ಲಾಹನು ಈ ಸರ್ಕಾರಗಳಿಗೂ ಬುದ್ಧಿ ನೀಡಲಿ ಮತ್ತು ಶೀಘ್ರದಲ್ಲೇ ಅಲ್ಲಾಹನು ಜಮಾಅತಿನ ಪರವಾಗಿ ದೈವಿಕ ದೃಷ್ಟಾಂತಗಳನ್ನು ಪ್ರಕಟಿಸಲಿ.

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 10-10-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon